## ನಿರೀಕ್ಷೆ ಹುಟ್ಟಿಸಿದ ಪ್ರಯತ್ನಗಳು

2018ರಲ್ಲಿ ವಿವಿಧ ಕಾರಣಗಳಿಂದಾಗಿ ಗಮನಸೆಳೆದ ಕೆಲವು ಚಿತ್ರಗಳು ಹೀಗಿವೆ:

'ಹಂಬಲ್ ಪೊಲಿಟಿಷಿಯನ್ ನೊಗ್‌ರಾಜ್' (ನಿ: ಸಾದ್ ಖಾನ್), 'ಬೃಹಸ್ಪತಿ' (ನಿ: ನಂದಕಿಶೋರ್), 'ರಾಜು ಕನ್ನಡ ಮೀಡಿಯಂ' (ನಿ: ನರೇಶ್‌ಕುಮಾರ್), 'ಚೂರಿಕಟ್ಟೆ' (ನಿ: ರಘು ಶಿವಮೊಗ್ಗ), 'ಕನಕ' (ನಿ: ಆರ್. ಚಂದ್ರು), 'ಪ್ರೇಮಬರಹ' (ನಿ: ಅರ್ಜುನ್ ಸರ್ಜಾ), '3' (ದಂಡುಪಾಳ್ಯ, ನಿ: ಶ್ರೀನಿವಾಸರಾಜು), 'ರಾಜರಥ' (ನಿ: ಅನೂಪ್ ಭಂಡಾರಿ), 'ಜಾನಿ ಜಾನಿ ಎಸ್ ಪಪ್ಪ' (ನಿ: ಪ್ರೀತಂ ಗುಬ್ಬಿ), 'ಹೆಬ್ಬೆಟ್ ರಾಮಕ್ಕ' (ನಿ: ನಂಜುಂಡೇಗೌಡ ಎನ್.ಆರ್.), 'ಕಾನೂರಾಯಣ' (ನಿ: ಟಿ.ಎಸ್. ನಾಗಾಭರಣ), 'ರ‍್ಯಾಂಬೊ 2' (ನಿ: ಅನಿಲ್ ಕುಮಾರ್), 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' (ನಿ: ನರೇಂದ್ರ ಬಾಬು), 'ವೆನಿಲ್ಲ' (ನಿ: ಜಯತೀರ್ಥ), 'ಆ ಕರಾಳ ರಾತ್ರಿ' (ನಿ: ದಯಾಳ್ ಪದ್ಮನಾಭನ್), 'ಹಸಿರು ರಿಬ್ಬನ್' (ನಿ: ಎಚ್.ಎಸ್. ವೆಂಕಟೇಶಮೂರ್ತಿ), 'ಕಥೆಯೊಂದು ಶುರುವಾಗಿದೆ' (ನಿ: ಸೆನ್ನಾ ಹೆಗ್ಡೆ), 'ಸಾವಿತ್ರಿಬಾಯಿ ಫುಲೆ' (ನಿ: ವಿಶಾಲ್ ರಾಜ್), 'ಇರುವುದೆಲ್ಲವ ಬಿಟ್ಟು' (ನಿ: ಕಾಂತ ಕನ್ನಲ್ಲಿ), 'ಅಂಬಿ ನಿಂಗ್ ವಯಸ್ಸಾಯ್ತೋ' (ನಿ: ಗುರುದತ್ ಗಾಣಿಗ್), 'ಅಮ್ಮಚ್ಚಿಯೆಂಬ ನೆನಪು' (ನಿ: ಚಂಪಾ ಶೆಟ್ಟಿ), 'ವಿಕ್ಟರಿ 2' (ನಿ: ಹರಿ ಸಂತೋಷ್), '8 ಎಂಎಂ ಬುಲ್ಲೆಟ್' (ನಿ: ಹರಿಕೃಷ್ಣ), 'ತಾಯಿಗೆ ತಕ್ಕ ಮಗ' (ನಿ: ಶಶಾಂಕ್), 'ಕಿಸ್ಮತ್' (ನಿ: ವಿಜಯ ರಾಘವೇಂದ್ರ), 'ಭೈರವಗೀತ' (ನಿ: ಸಿದ್ಧಾರ್ಥ) ಹಾಗೂ 'ಆರೆಂಜ್' (ನಿ: ಪ್ರಶಾಂತ್ ರಾಜ್).

ಮೇಲಿನ ಪಟ್ಟಿಯಲ್ಲಿ ಹಿರಿಯ ನಿರ್ದೇಶಕರ ಚಿತ್ರಗಳೂ ಕಿರಿಯ ನಿರ್ದೇಶಕರ ಚೊಚ್ಚಲ ಪ್ರಯೋಗಗಳೂ ಇವೆ. 'ರಂಗಿತರಂಗ' ಚಿತ್ರದ ಯಶಸ್ಸಿನ ಅನೂಪ್ ಭಂಡಾರಿ ಅವರ 'ರಾಜರಥ' ಭಾರೀ ನಿರೀಕ್ಷೆ ಹುಟ್ಟಿಸಿ ಠುಸ್ಸಾದ ಸಿನಿಮಾ. ಹಿರಿಯ ಕವಿ ಎಚ್ಚೆಸ್ವಿ ಅವರ 'ಹಸಿರು ರಿಬ್ಬನ್' ಹಾಗೂ ಚಂಪಾ ಶೆಟ್ಟಿ ಅವರ 'ಅಮ್ಮಚ್ಚಿಯೆಂಬ ನೆನಪು' ಗಮನಾರ್ಹ ಪ್ರಯೋಗಗಳಾಗಿಯೂ ಸಹೃದಯರ ಗಮನಸೆಳೆಯದೆ ಹೋದ ಪ್ರಯತ್ನಗಳು. ಇನ್ನಷ್ಟು ಚರ್ಚೆ ಹಾಗೂ ಮನ್ನಣೆಗೆ ಅರ್ಹವಾಗಿದ್ದ ಈ ಚಿತ್ರಗಳು ಸಲೀಸಾಗಿ ತೆರೆಮರೆಗೆ ಸರಿಯುವುದು ಪ್ರಯೋಗಶೀಲ ಚಿತ್ರಗಳ ನಿರ್ಮಾತೃಗಳನ್ನು ಕಂಗೆಡಿಸುವಂತಿದೆ. ಇದೇ ಸಂದರ್ಭದಲ್ಲಿ ಸತ್ಯಪ್ರಕಾಶ್ ನಿರ್ದೇಶನದ 'ಒಂದಲ್ಲಾ ಎರಡಲ್ಲಾ' ಚಿತ್ರವನ್ನೂ ನೆನಪಿಸಿಕೊಳ್ಳಬೇಕು. 'ರಾಮಾ ರಾಮಾ ರೇ' ಸಿನಿಮಾದ ಯಶಸ್ಸಿನ ಆತ್ಮವಿಶ್ವಾಸದಲ್ಲಿ ಸತ್ಯಪ್ರಕಾಶ್ ರೂಪಿಸಿದ 'ಒಂದಲ್ಲಾ ಎರಡಲ್ಲಾ' ಸಿನಿಮಾ ತೆರೆಕಂಡು ದಾರುಣ ಸೋಲು ಕಂಡಿತು. ಪ್ರಯೋಗಶೀಲ ಚಿತ್ರವಾಗಿ ಮಾತ್ರವಲ್ಲದೆ, ನೋಡಿಸಿಕೊಳ್ಳುವ ಗುಣವನ್ನೂ ಹೊಂದಿದ್ದ ಈ ಸಿನಿಮಾ ಪ್ರೇಕ್ಷಕರ ಗಮನಸೆಳೆಯದೆ ಹೋದುದು ಕನ್ನಡ ಚಿತ್ರರಂಗದಲ್ಲಿ ಉಳಿದಿರಬಹುದಾದ ಅಲ್ಪಸ್ವಲ್ಪ ಸದಭಿರುಚಿಗೆ ಹೊಡೆದ ಮೊಳೆಯಂತಿದೆ. ಈ ಚಿತ್ರದ ಬೆನ್ನಿಗೇ ತೆರೆಕಂಡ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ' ಚಿತ್ರದ ಬಗ್ಗೆ ಒಂದು ವರ್ಗದ ಪ್ರೇಕ್ಷಕರು ಉತ್ಸಾಹ ವ್ಯಕ್ತಪಡಿಸಿದ್ದು ಯಶಸ್ಸಿಗೆ ಗುಣಮಟ್ಟವಷ್ಟೇ ಮಾನದಂಡವಲ್ಲ ಎನ್ನುವುದನ್ನು ಸೂಚಿಸುವಂತಿದೆ.

ಹಿಂದಕ್ಕೆ ಪಡೆದದ್ದರಲ್ಲಿ ಕನ್ನಡ ಚಿತ್ರರಂಗಕ್ಕೆ ಒಂದು ಪಾಠವಿರುವಂತಿದೆ.

### ಸಿನಿಮೇತರ ಸುದ್ದಿ

ಸಿನಿಮಾಗಳ ಮೂಲಕ ಸುದ್ದಿಯಾಗಬೇಕಾದ ನಾಯಕ ನಟರು ಸಿನಿಮೇತರ ಕಾರಣಗಳಿಂದ ಸುದ್ದಿಯಾದುದು 2018ರ ವಿಶೇಷಗಳಲ್ಲೊಂದು. ಇವುಗಳಲ್ಲಿ ಮುಖ್ಯವಾದುದು – ನಟ ದುನಿಯಾ ವಿಜಯ್ ಅವರ ಸಂಸಾರದಲ್ಲಿನ ಅಪಸ್ವರ ಮತ್ತೆ ಮತ್ತೆ ಬೀದಿರಂಪವಾದುದು. ವಿಜಯ್‌ರ ಇಬ್ಬರು ಹೆಂಡತಿಯರು ಹಾಗೂ ಮಗಳು ಈ ಕೌಟುಂಬಿಕ ಕಲಹದಲ್ಲಿ ಮತ್ತೆ ಮತ್ತೆ ಮಾಧ್ಯಮಗಳ ಗಮನಸೆಳೆದರು. ಸ್ನೇಹಿತನ ಮೇಲೆ ವಿಜಯ್ ಹಲ್ಲೆ ನಡೆಸಿದ್ದಾರೆ ಎನ್ನುವುದು ಕೂಡ ಸುದ್ದಿಯಾಯಿತು.

ಹೆಚ್ಚು ಚರ್ಚೆಯಾಗದೆ ಹೋದರೂ, ಸಿನಿಮಾ ನಿರ್ದೇಶಕರ ನಡುವೆಯೇ ಗುಸುಗುಸು ಮಾತುಗಳಿಗೆ ಕಾರಣವಾದುದು ಎಸ್. ನಾರಾಯಣ್ ಅವರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ದೊರೆತ ಪ್ರಸಂಗ. ಕನ್ನಡ ಚಿತ್ರರಂಗಕ್ಕೆ ನಾರಾಯಣ್ ಅವರ ಸೃಜನಶೀಲ ಕೊಡುಗೆಯೇನು ಎನ್ನುವ ಪ್ರಶ್ನೆಗೆ ಉತ್ತರಿಸುವ ಪ್ರಯತ್ನವನ್ನು ಬಹಿರಂಗವಾಗಿ ಯಾವ ನಿರ್ದೇಶಕರೂ ಮಾಡದಿದ್ದರೂ, ಒಳಗೊಳಗೇ ನಾರಾಯಣ್‌ಗೆ ಬೆಂಬಲವಾಗಿ ನಿಂತದ್ದು ಕನ್ನಡ ಸಿನಿಮಾಗಳ ನಿರ್ದೇಶಕದ ಬೌದ್ಧಿಕ ದಾರಿದ್ರ್ಯಕ್ಕೆ ಉದಾಹರಣೆ ಎನ್ನಬಹುದೇನೋ? ಸಂಜನಾ ಅವರ 'ಮೀ ಟೂ' ಆರೋಪದ ಸಂದರ್ಭದಲ್ಲೂ ನಿರ್ದೇಶಕರ ಸಂಘದ ಮುಂಚೂಣಿಯಲ್ಲಿರುವವರು ನಟಿಯ ಕ್ಷಮಾಪಣೆಗೆ ಪಟ್ಟು ಹಿಡಿದದ್ದು ಕೊಳಕು ಚಿತ್ರವೊಂದರ ಹಾಸ್ಯಾಸ್ಪದ ಕ್ಲೈಮ್ಯಾಕ್ಸ್‌ನಂತಿತ್ತು.



'ಆರೆಂಜ್' ಚಿತ್ರದಲ್ಲಿ ಪ್ರಿಯಾ ಆನಂದ್ ಮತ್ತು ಗಣೇಶ್